**ಸಾಕ್ಷಿಯನ್ನು ದಿ: 04.06.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:**

ಮೂರು ಎಕ್ಸರೇ ಫೀಲಂಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 16 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 3 ನೇ ಎದುರುದಾರರ ಪರ ವಕೀಲರಿಂದ:**

ನಾನು ಪ್ರಯಾಣ ಮಾಡುತ್ತಿದ್ದ ವಾಹನ ಬಿಳಿ ಬಣ್ಣದ ಕಾರಾಗಿರುತ್ತದೆ. ಅದನ್ನು ಬಾಡಿಗೆಗೆ ತೆಗೆದುಕೊಂಡು ಬಂದಿದ್ದರು. ಸದರಿ ಕಾರಿನಲ್ಲಿ ನಾನು ಹಿಂಭಾಗದಲ್ಲಿ ಕುಳಿತುಕೊಂಡಿದ್ದೆ. ಸದರಿ ವಾಹನದಲ್ಲಿ ನಾನು ಪ್ರಯಾಣ ಮಾಡುತ್ತಿದ್ದೆ ಎಂದು ತೋರಿಸಲು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸಿರುತ್ತಾರೆ. ಕ್ರಿಮಿನಲ್ ಪ್ರಕರಣದಲ್ಲಿ ಪೋಲೀಸರು ನನಗೆ ವಿಚಾರಿಸಿರುವುದಿಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಪೋಲೀಸ್ ದಾಖಲೆಗಳಲ್ಲಿ ಏನೆಲ್ಲಾ ಬರೆದಿದೆ ಎಂದು ತಿಳಿದುಕೊಂಡಿರುವುದಿಲ್ಲ. ದೋಷರೋಪಣಾ ಪಟ್ಟಿಯಲ್ಲಿ ನನ್ನನ್ನು ಪ್ರತ್ಯಕ್ಷ ದರ್ಶಿಯಾಗಿ ಕಾಣಿಸಿದ್ದು ಗಾಯಾಳು ಎಂದು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಗಾಯ ಆಗಿ ನಾನು ಆಸ್ಪತ್ರೆಯಲ್ಲಿದ್ದೆ ಎಂದು ಉತ್ತರಿಸಿರುತ್ತಾರೆ. ದೋಷರೋಪಣಾ ಪಟ್ಟಿಯಲ್ಲಿ ನನ್ನನ್ನು 6 ನೇ ಸಾಕ್ಷಿಯಾಗಿ ಕಾಣಿಸಿದ್ದು ಅಪಘಾತದಲ್ಲಿ ನನಗೆ ಯಾವುದೇ ಗಾಯ ಆಗಿರುವುದಿಲ್ಲ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ವಾಹನ ಚಾಲಕ ಯಾರು ಎಂದು ನನಗೆ ಗೊತ್ತಿಲ್ಲ. ಚಾಲಕ ಸೇರಿ ಸದರಿ ವಾಹನದಲ್ಲಿ ಐದು ಜನ ಪ್ರಯಾಣಿಸುತ್ತಿದ್ದೇವು. ದೋಷರೋಪಣಾ ಪಟ್ಟಿಯಲ್ಲಿ ಚಾಲಕನಿಗೆ ಮತ್ತು ಸಾಕ್ಷಿ 7 ರತ್ನಮ್ಮ ರವರಿಗೆ ಮಾತ್ರ ಪೆಟ್ಟಾಗಿದೆ ಎಂದು ನಮೂದಾಗಿದೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ನನಗೆ ಸಣ್ಣ ಪುಟ್ಟ ಗಾಯ ಆದ ಕಾರಣ ನಾನು ಆಸ್ಪತ್ರೆಗೆ ದಾಖಲಾಗಿರುವುದಿಲ್ಲ ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯನ್ನು ನಾನೇ ಹಾಜರು ಪಡಿಸಿ ಈಗ ಅದರಲ್ಲಿರುವ ವಿಷಯ ಪೋಲೀಸರಿಗೆ ಹೇಳಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಎಡಗಾಲಿಗೆ ಗಾಯ ಆಗಿರುತ್ತದೆ. ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಯಾವ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಎಕ್ಸರೇ ತೆಗೆಸಲು ವೈಧ್ಯರು ಸಲಹೆ ನೀಡಿರುತ್ತಾರೆ ಸದರಿ ದಾಖಲೆ ನನ್ನ ಬಳಿ ಇಲ್ಲ. ಎಕರೇ ವರದಿ ಹಾಜರು ಪಡಿಸಿರುವುದಿಲ್ಲ. ಕಾರಿಗೆ ಬಿಳಿ ಬಣ್ಣದ ಅಥಾವ ಹಳದಿ ಬಣ್ಣದ ನಂಬರ್ ಪ್ಲೇಟ್ ಇತ್ತಾ ಎಂದು ಗೊತ್ತಿಲ್ಲ. ಅಪಘಾತದಿಂದ ನನಗೆ ಯಾವುದೇ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗೃಹಿಣಿಯಾಗಿದ್ದು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕೆಲಸದ ಬಗ್ಗೆ ಹಾಗೂ ಸಂಪಾದನೆಯ ಬಗ್ಗೆ ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾನು ಸೀಟ್ ಬೆಲ್ಟ್ ಹಾಕಿರಲಿಲ್ಲ ಎಂದರೆ ಸರಿ. ಮುಂಭಾಗದಲ್ಲಿ ಕುಳಿತುಕೊಂಡಿರುವವರಿಗೆ ಮಾತ್ರ ಸೀಟ್ ಬೆಲ್ಟ್ ಇದ್ದು ಹಿಂದೆ ಕುಳಿತುಕೊಂಡವರಿಗೆ ಸೀಟ್ ಬೆಲ್ಟ್ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ನಿಯಮ ಉಲ್ಲಂಘನೆ ಮಾಡಿದ ಕಾರಣ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯ ಆಗದೇ ಇರುವ ಕಾರಣ ಅರ್ಜಿಯಲ್ಲಿ ಕೇಳಿರುವ ಹಾಗೆ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಪರಿಹಾರಕೊಸ್ಕರ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.